**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 460/2023**

**ಸಿ.ಡಬ್ಲ್ಯೂಃ2 , ಪಿ.ಡಬ್ಲ್ಯೂಃ 2**

ಸಾಕ್ಷಿದಾರರ ಹೆಸರು : ಇರ್ಷಾದ್ ಮೊಹಿದ್ದೀನ್

ತಂದೆಯ ಹೆಸರು : ಇಸ್ಮಾಯಿಲ್ ಸಿದ್ದೀಕ್

ವಯಸ್ಸು : 49 ವರ್ಷ

ಉದ್ಯೋಗ : ವ್ಯವಹಾರ

ವಾಸ್ತವ್ಯ : ಕೆ ಹೆಚ್ ಬಿ ಕಾಲನಿ, ಭಟ್ಕಳ

**ಸಾಕ್ಷಿ ಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 24/04/2024**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 12.05.2022 ರಂದು ಚಾಸಾ –17 ರವರು ಫೊನ್ ಕರೆ ಮಾಡಿ ಮೂಡ ಭಟ್ಕಳಕ್ಕೆ ಪಂಚನಾಮೆ ಮಾಡುವ ಸಲುವಾಗಿ ಕರೆದಿರುತ್ತಾರೆ. ಹಾಗೆ ನಾನು ಮೂಡ ಭಟ್ಕಳಕ್ಕೆ ಹೋಗಿರುತ್ತೇನೆ. ಅಲ್ಲಿ ಚಾಸಾ –1 ಮತ್ತು 3 ರವರು ಇದ್ದರು. ಸದರಿ ಸ್ಥಳದಲ್ಲಿ ಒಂದು ಎಲ್ ಪಿ ಜಿ ಗ್ಯಾಸ್ ಗಾಡಿ ಸಂಖ್ಯೆ ಕೆಎ –01 ಅನ್ನು ರಸ್ತೆಯ ಪಕ್ಕದಲ್ಲಿ ಇತ್ತು . ಸದರಿ ಗಾಡಿಯ ಸಂಪೂರ್ಣ ಸಂಖ್ಯೆ ನೆನಪಿಲ್ಲ ಹಾಗೆ ಇನ್ನೊಂದು ಸ್ಕೂಟಿ ವಾಹನ ಸಂಖ್ಯೆ ಕೆಎ –20 ಇತ್ತು. ಸದರಿ ಗಾಡಿಯ ಸಂಪೂರ್ಣ ಸಂಖ್ಯೆ ನೆನಪಿಲ್ಲ. ಪೊಲೀಸರು ಬೆಳಿಗ್ಗೆ 10.30 ರಿಂದ 11.00 ಗಂಟೆಯವರೆಗೆ ರಸ್ತೆಯ ಅಳತೆ ಮತ್ತು ನಕ್ಷೆ ತಯಾರಿಸಿರುತ್ತಾರೆ. ನಂತರ ಅದರ ಮೇಲೆ ನನ್ನ ಸಹಿ ಪಡೆದಿರುತ್ತಾರೆ.ಹಾಗೆ ಫೊಟೋ ತೆಗೆದಿರುತ್ತಾರೆ. ಹಾಗೆ ಒಂದು ದಾಖಲೆಯ ಮೇಲೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ– 4 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ–4 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ– 5 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–5 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–1 ಮತ್ತು 2 ಫೊಟೋಗಳನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ಪಂಚನಾಮೆಯ ದಿನ ನಾನು ಎಲ್ ಪಿ ಜಿ ಗ್ಯಾಸ್ ನ ಟ್ಯಾಂಕರ್ ಸಂಖ್ಯೆಃ ಕೆಎ –01 – ಎಡಿ –7544 ಆಗಿತ್ತು ಎಂದರೆ ವಾಹನ ಸಂಖ್ಯೆ ನೆನಪಿಲ್ಲವೆಂದು ನುಡಿದಿರುತ್ತಾರೆ. ಹಾಗೆ ಸ್ಕೂಟಿ ಹಿರೋ ಕಂಪನಿಯ ಸ್ಕೂಟಿಯಾಗಿದ್ದು ಅದರ ಸಂಖ್ಯೆಃ ಕೆಎ –20 / ಇಎಮ್ – 0821 ಆಗಿತ್ತು ಎಂದರೆ ಸ್ಕೂಟಿ ಹಿರೋ ಕಂಪನಿಯದು ಆಗಿರುತ್ತದೆ ಆದರೆ ಅದರ ನಂಬರ್ ನೆನಪಿಲ್ಲ. ಸ್ಕೂಟಿಯ ಹಿಂದಿನ ಭಾಗವು ಜಖಂಗೊಂಡಿತ್ತು ಎಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಆರ್ ಜಿ ಎನ್ ವಕೀಲರಿಂದ,**

ನನ್ನ ವಿರುದ್ಧ ಕ್ರಿಮಿನಲ್ ಪ್ರಕರಣಗಳು ಇರುತ್ತವೆ ಎಂದರೆ ಸರಿಯಲ್ಲ.ಹಾಗೆ ನಾನು ಅನೇಕ ಪ್ರಕರಣಗಳಲ್ಲಿ ಪಂಚಸ ಸಾಕ್ಷಿಯಾಗಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಪಂಚಸಾಕ್ಷಿಯಾಗಿ ಬರಲು ನೊಟೀಸು ನೀಡಿರುವುದಿಲ್ಲ. ಪೊಲೀಸರು ನನಗೆ ಪೋನ್ ಮುಾಲಕ 10 .00 ಗಂಟೆಗೆ ಸ್ಥಳಕ್ಕೆ ಬರಲು ಹೇಳಿರುತ್ತಾರೆ. ನಾನು ಹೇಳವಂತಹ ಪಂಚನಾಮೆ ನಡೆದಾಗ ಸಾರ್ವಜನಿಕರು ಸೇರಿದ್ದರು. ಮೂಡ ಭಟ್ಕಳದ ಬೈ ಪಾಸ್ ರಸ್ತೆಯು ಅನೇಕ ಸಾರ್ವಜನಿಕರು ಓಡಾಡುವ ಸ್ಥಳ ಎಂದರೆ ಸರಿ. ಸದರಿ ಸ್ಥಳದ ಅಕ್ಕಪಕ್ಕದಲ್ಲಿ ಗೂಡಂಗಡಿಗಳು ಮತ್ತು ವ್ಯಾಪಾರ ಮಳಿಗೆಗಳು ಇರುತ್ತವೆ ಎಂದರೆ ಸರಿ. ಪೊಲೀಸರು ಸ್ಥಳದ ಅಕ್ಕಪಕ್ಕದಲ್ಲಿರುವ ಅಂಗಡಿಯವನ್ನು ಪಂಚಸಾಕ್ಷಿಗಳಾಗಿ ನನ್ನ ಮುಂದೆ ಕರೆದಿರುವುದಿಲ್ಲ. ಘಟನೆಗೆ ಸಂಬಂಧಿಸಿದಂತೆ ಅಕ್ಕಪಕ್ಕದ ಅಂಗಡಿಯವರನ್ನು ಪೊಲೀಸರು ವಿಚಾರಿಸಿರುವುದಿಲ್ಲ. ಘಟನಾ ಸ್ಥಳವು ಹೊನ್ನಾವರ ಕಡೆಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯ ಬಲ ಬದಿಯಲ್ಲಿ ಇತ್ತು. 2022 ನೇ ಇಸವಿಯಲ್ಲಿ ರಾಷ್ಟ್ರೀಯ ಹೆದ್ದಾರಿ –66 ರ ಅಗಲೀಕರಣ ಕೆಲಸ ಆಗುತ್ತಿತ್ತು ಎಂದರೆ ಸರಿಯಲ್ಲ. ಘಟನಾ ಸ್ಥಳದ ಪಶ್ಚಿಮ ದಿಕ್ಕಿಗೆ ಹನುಮಾನ್ ದೇವಸ್ಥಾನಕ್ಕೆ ಹೋಗುವ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಪಶ್ಚಿಮ ದಿಕ್ಕಿಗೆ ಹನುಮಾನ್ ದೇವಸ್ಥಾನಕ್ಕೆ ಹೋಗುವ ರಸ್ತೆ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹನುಮಾನ್ ದೇವಸ್ಥಾನಕ್ಕೆ ಹೋಗುವ ಕಚ್ಚಾ ರಸ್ತೆಯು ಇಳಿಮುಖ ಆಗಿರುತ್ತದೆ ಎಂದರೆ ಸಾಕ್ಷಿಯು ಮಹಜರು ಆದ

ಸ್ಥಳದಿಂದ ಸದರಿ ರಸ್ತೆಗೂ ತುಂಬಾ ದೂರ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಿಪಿ- 1 ಮತ್ತು 2 ಪೋಟೋದಲ್ಲಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತ ವಾಹನಗಳು ಕಾಣುತ್ತಿಲ್ಲ ಎಂದರೆ ಸರಿ.



ಸಾಕ್ಷಿಯು ಮುಂದುವರೆದು ವಾಹನವು ರಸ್ತೆಯ ಪಕ್ಕದಲ್ಲಿತ್ತು ಎಂದು ಉತ್ತರಿಸಿರತ್ತಾರೆ. ನಾನು ವಾಹನವು ರಸ್ತೆಯ ಪಕ್ಕದಲ್ಲಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಮುಖ್ಯ ವಿಚಾರಣೆಯಲ್ಲಿ ಹೇಳುವಂತಹ ನಿಪಿ-4 ಮಹಜರು ಸ್ಥಳದಲ್ಲಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮಹಜರನ್ನು ಪೊಲೀಸ್ ಠಾಣೆಯಲ್ಲಿ ತಯಾರಿಸಿ ಠಾಣೆಯಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ಪೊಟೋಗಳನ್ನು ನಾನು ಹೇಳುವಂತೆ ಮಹಜರು ಸಮಯದಲ್ಲಿ ತೆಗೆದಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-5 ನಕ್ಷೆಯನ್ನು ಸಹ ಠಾಣೆಯಲ್ಲಿ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**